ತಾಲ್ಲೂಕು	ಆನ್‌ಲೈನ್ ಲಾಟರಿ ಸೆಂಟರ್‌ಗಳು
ಶಿವಮೊಗ್ಗ	76
ಭದ್ರಾವತಿ	22
ಸಾಗರ	12
ಹೊಸನಗರ	07
ಶಿಕಾರಿಪುರ	04
ಸೊರಬ	01
ತೀರ್ಥಹಳ್ಳಿ	--
ಒಟ್ಟು	**122**

ಆ) ಸರ್ಕಾರ ಯಾವುದೇ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿಲ್ಲ. ಆದರೆ ದಿನಾಂಕ: 02.06.2006ರ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಆದೇಶದನ್ವಯ ಹೊರ ರಾಜ್ಯಗಳು ಈ ರಾಜ್ಯದಲ್ಲಿ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿರುವುದರಿಂದ ರಾಜ್ಯ ಸರ್ಕಾರವು ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸದ ವಿನಹ ಈ ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸಲು ಸಾಧ್ಯವಿರುವುದಿಲ್ಲ.

ಇ) ರಾಜ್ಯ ಸರ್ಕಾರವು ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಿದ ವಿನಹ ಈ ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸಲು ಸಾಧ್ಯವಿರುವುದಿಲ್ಲ.

753 (1112) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಯೋಜನೆಗಳಿಗೆ ಕೇಂದ್ರ ಸರ್ಕಾರವು ಸಹಾಯಾನುದಾನವನ್ನು ಒದಗಿಸುತ್ತಿದೆ ; (ಕಳೆದ ಎರಡು ಆರ್ಥಿಕ ವರ್ಷಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುವುದು) ;

ಆ) ಈ ಅವಧಿಯಲ್ಲಿ ವಿವಿಧ ಇಲಾಖೆಗಳಿಗೆ ಬಿಡುಗಡೆಯಾದ ಸಹಾಯಾನುದಾನ ಮತ್ತು ಈ ಅನುದಾನವನ್ನು ಉಪಯೋಗಿಸಿದ ಬಗ್ಗೆ ವಿವರಗಳನ್ನು ಒದಗಿಸುವುದು ;

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ರಾಜ್ಯ ಯೋಜನೆ / ಕೇಂದ್ರ ಪುರಸ್ಕೃತ ಯೋಜನೆ / ಕೇಂದ್ರ ವಲಯ ಯೋಜನೆ ಹಾಗೂ ಯೋಜನೇತರದಲ್ಲಿ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳಿಗಾಗಿ ಕೇಂದ್ರದಿಂದ ರಾಜ್ಯಕ್ಕೆ ಹಣ ಬಿಡುಗಡೆಯಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಕೇಂದ್ರದಿಂದ ಸ್ವೀಕೃತವಾದ ಸಹಾಯಾನುದಾನ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಪ್ರವರ್ಗ	2004–05	2005–06 (ತಾತ್ಕಾಲಿಕ)
ಯೋಜನೇತರ ಅನುದಾನಗಳು	317.49	1735.74
ರಾಜ್ಯ ಯೋಜನೆಗಳಿಗೆ ಅನುದಾನಗಳು	1036.03	915.28
ಕೇಂದ್ರ ಪುರಸ್ಕೃತ/ ಕೇಂದ್ರ ವಲಯ ಯೋಜನೆಗಳು	793.04	981.35
ಒಟ್ಟು	**2146.56**	**3632.37**

ಆ)ಅ) 2004–05 ಮತ್ತು 2005–06ನೇ (ತಾತ್ಕಾಲಿಕ) ಸಾಲಿಗೆ ಇಲಾಖಾವಾರು ಕೇಂದ್ರ ಪುರಸ್ಕೃತ ಯೋಜನೆ ಮತ್ತು ಕೇಂದ್ರ ವಲಯ ಯೋಜನೆಯ ವೆಚ್ಚಗಳ ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಆ) ರಾಜ್ಯ ಯೋಜನಾ ಅನುದಾನಗಳು ಬ್ಲಾಕ್ ಅನುದಾನಗಳ ಸ್ವರೂಪದಲ್ಲಿದ್ದು, ರಾಜ್ಯ ಯೋಜನೆಗೆ ಸಹಾಯಾನುದಾನವಾಗಿರುತ್ತದೆ. ಆದ್ದರಿಂದ ಇವುಗಳನ್ನು ರಾಜ್ಯದ ಯೋಜನೆಯನ್ನು ಭರಿಸಲು ಉಪಯೋಗಿಸಲಾಗುತ್ತದೆ. ಇದನ್ನು ಒಂದು ಇಲಾಖೆಯ ನಿರ್ದಿಷ್ಟ ಯೋಜನೆಗಳಿಗಾಗಿಯೆಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಇದೇ ರೀತಿಯಾಗಿ ಯೋಜನೇತರ ಅನುದಾನಗಳ ಒಂದು ಪ್ರಮುಖ ಅಂಶವಾಗಿರುವ ಮೌಲ್ಯವರ್ಧಿತ ತೆರಿಗೆಯ ಪರಿಹಾರ ಅನುದಾನವೂ ಸಹ ಇಲಾಖೆಯ ಯಾವುದೇ ಒಂದು ನಿರ್ದಿಷ್ಟ ಯೋಜನೆಗಾಗಿ ಬಳಸಲಾಗುವುದಿಲ್ಲ. ಆರ್ಥಿಕ ಆಯೋಗ ಅನುದಾನಗಳಂತಹ ಇತರೆ ಯೋಜನೇತರ ಅನುದಾನಗಳ ಮೇಲಿನ ವೆಚ್ಚಗಳ ವಿವರಗಳನ್ನು ಅನುಬಂಧ–ಬಿ ಯಲ್ಲಿ ನೀಡಲಾಗಿದೆ.

ಅನುಬಂಧ–ಎ

(ರೂ. ಕೋಟಿಗಳಲ್ಲಿ)

ಇಲಾಖೆಗಳು	ಕೇಂದ್ರ ಪುರಸ್ಕೃತ / ಕೇಂದ್ರ ವಲಯ ಯೋಜನೆಗಳಿಗೆ ಆದ ವೆಚ್ಚ	
	2004–2005	2005–2006 (ತಾತ್ಕಾಲಿಕ)
ಕೃಷಿ ಇಲಾಖೆ	86.15	122.05
ಪಶು ಸಂಗೋಪನಾ ಇಲಾಖೆ	8.66	13.02
ಸಹಕಾರ ಇಲಾಖೆ	1.35	0.11

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	4.70	3.84
ಶಿಕ್ಷಣ ಇಲಾಖೆ	23.56	32.19
ಮೀನುಗಾರಿಕಾ ಇಲಾಖೆ	12.66	10.50
ಅರಣ್ಯ ಇಲಾಖೆ	15.37	12.67
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	174.06	129.46
ವಸತಿ ಇಲಾಖೆ	0.11	0.04
ಕೈಗಾರಿಕಾ ಇಲಾಖೆ	19.12	14.15
ನೀರಾವರಿ ಇಲಾಖೆ	10.00	10.46
ಕನ್ನಡ ಮತ್ತು ಸಂಸ್ಕೃತಿ ಇಲಾಖೆ	0.04	0.00
ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆ	0.00	0.03
ಯೋಜನಾ ಇಲಾಖೆ	3.36	7.04
ಲೋಕೋಪಯೋಗಿ ಇಲಾಖೆ	4.50	4.55
ಕಂದಾಯ ಇಲಾಖೆ	0.88	3.65
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ	3.14	26.29
ಸಮಾಜ ಕಲ್ಯಾಣ ಇಲಾಖೆ	177.50	251.43
ಕ್ರೀಡೆ ಮತ್ತು ಯುವಜನ ಸೇವಾ ಇಲಾಖೆ	2.75	2.18
ಪ್ರವಾಸೋದ್ಯಮ ಇಲಾಖೆ	45.91	10.70
ನಗರಾಭಿವೃದ್ಧಿ ಇಲಾಖೆ	172.48	287.17
ಒಟ್ಟು	**766.30**	**941.53**

ಅನುಬಂಧ–ಬಿ

(ರೂ. ಕೋಟಿಗಳಲ್ಲಿ)

ಇಲಾಖೆಗಳು	ಯೋಜನೇತರ ಅನುದಾನಗಳು	
	2004–2005	**2005–2006** (ತಾತ್ಕಾಲಿಕ)
ಕಂದಾಯ	74.00	33.00
ಗೃಹ	11.10	65.12
ಕಾರಾಗೃಹ	1.88	0.00
ಅಗ್ನಿಶಾಮಕ ಸೇವೆಗಳು	5.07	0.00
ನ್ಯಾಯಾಂಗ	6.93	7.22

ವಾಣಿಜ್ಯ ತೆರಿಗೆ	1.52	0.00
ಅಬಕಾರಿ	0.89	0.00
ಸಾರಿಗೆ	0.74	0.00
ನೋಂದಣಿ ಮತ್ತು ಮುದ್ರಾಂಕ	7.26	0.00
ಆರೋಗ್ಯ	12.47	0.00
ಶಿಕ್ಷಣ	17.36	0.00
ಕನ್ನಡ ಮತ್ತು ಸಂಸ್ಕೃತಿ	0.99	0.00
ಸಣ್ಣ ನೀರಾವರಿ	38.13	0.00
ಗ್ರಾಮೀಣಾಭಿವೃದ್ಧಿ	0.00	8.65
ಅರಣ್ಯ	0.00	5.39
ರಸ್ತೆಗಳು	52.76	0.00
ಪ್ರಕೃತಿ ವಿಕೋಪ ಪರಿಹಾರ	240.20	474.88
ಒಟ್ಟು	**471.30**	**594.26**

754 (748) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಾಲ್ಲೂಕು ಕಛೇರಿಯ ಭೂಮಿ/ಕಿಯಾಸ್ಕ್ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆವಿಗೂ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಇಲ್ಲ.

ಆ) ಭೂಮಿ ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳು ಯಾವುದು ಇಲ್ಲ. ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಂತಹ ಗ್ರಾಮ ಲೆಕ್ಕಿಗರನ್ನು ಆಯ್ಕೆ ಮಾಡಿ, ತರಬೇತಿ ನೀಡಿ ಈ ಕೇಂದ್ರಗಳಿಗೆ ನೇಮಿಸಲಾಗುತ್ತಿದೆ.

755 (1284) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಡೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 'ಬಗರ್ ಹುಕುಂ' ಸಮಿತಿ ರಚನೆಗೆ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು ;

ಆ) "ಆರಾಧನಾ" ಸಮಿತಿ ರಚನೆಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.